ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

22

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 11/3/24

# ಮಂತ್ರಿಗಳಿಗಿದು ನ್ಯಾಯವೇ...

ಜನಪ್ರತಿನಿಧಿ ಅಂದ್ರೆ ಆತ ಜನಸೇವಕ. ಇನ್ನೂ ಒಂದು ಹಂತ ಮೇಲಕ್ಕೇರಿ ಯಾವುದೇ ಸರ್ಕಾರದಲ್ಲಿ ಮಂತ್ರಿ ಆದ್ರೆ ಪ್ರಧಾನ ಸೇವಕ. ತನ್ನನ್ನು ಆರಿಸಿಕಳಿಸಿದ ಜನತೆಗೆ ಮಾತ್ರವಲ್ಲ ರಾಜ್ಯದ ಕಲ್ಯಾಣಕ್ಕೂ ಅವರ ಉತ್ತರದಾಯಿತ್ವ ಇರುತ್ತದೆ. ಜೊತೆಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರ ರಕ್ಷಕ. ಆದ್ರೆ ಪ್ರಸ್ತುತ ಸಚಿವರಾಗಿರೋರೆ ರಕ್ಷಣೆ ಕೋರಿ ಕೋರ್ಟ್ ಮೆಟ್ಟಿಲೇರಿದ್ರೆ ಜನಸಾಮಾನ್ಯರ ಕಾಪಾಡೋರು ಯಾರು ಇದು ಪ್ರಶ್ನಾರ್ಹ.

ಕಲ್ಪಿತ ಸಿಡಿ ಭೀತಿ ಕಾರಣಕ್ಕೆ ರಕ್ಷಣೆ ಕೋರಿ ಸಚಿವರಾದ ಡಾ.ಕೆ.ಸುಧಾಕರ್, ನಾರಾಯಣಗೌಡ, ಭೈರತಿ ಬಸವರಾಜು, ಬಿ.ಸಿ.ಪಾಟೀಲ್, ಶಿವರಾಂ ಹೆಬ್ಬಾರ್ ಹಾಗೂ ಎಸ್.ಟಿ.ಸೋಮಶೇಖರ್ ಕೋರ್ಟ್ ಮೊರೆ ಹೋಗಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಂತ್ರಿಗಳೇ ಭಯಕ್ಕೆ ಬಿದ್ದರೆ ಅವರನ್ನು ಆರಿಸಿ ಕಳಿಸಿದ ಮತದಾರನ ಕಥೆ ಏನು.

ಜೊತೆಗೆ ಸಂಸದೀಯ ವ್ಯವಸ್ಥೆಯಲ್ಲಿ ಒಬ್ಬ ಸಚಿವನಾಗಬೇಕಾದರೆ ಸಂವಿಧಾನದ ಹೆಸರಿನಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸುತ್ತಾರೆ. ರಾಗ-ದ್ವೇಷ ಇಲ್ಲದೆ ಭಯ, ಪಕ್ಷಪಾತ ಮಾಡುವುದಿಲ್ಲ ಎಂದು ಗೌಪ್ಯತಾ ಪ್ರಮಾಣ ಮಾಡುವುದಿದೆ. ಆದರೆ ಸಚಿವರುಗಳ ಈಗಿನ ಸನ್ನಿವೇಶದಲ್ಲಿ ಇದಕ್ಕೆ ಅರ್ಥವಿದೆಯಾ ಎನ್ನುವ ಪ್ರಶ್ನೆಯೂ ಕಾಡದೇ ಇರದು.

**ಸಂಯುಕ್ತ ಕರ್ನಾಟಕ**

ವಿಳಾಸ: ಸಮೂಹ ಸಂಪಾದಕರು
ಮಂತ್ರಿಗಳಿಗಿದು ನ್ಯಾಯವೇ ವಿಭಾಗ
ಸಂಯುಕ್ತ ಕರ್ನಾಟಕ
ನಂ.2, ರೆಸಿಡೆನ್ಸಿ ರಸ್ತೆ
ಬೆಂಗಳೂರು-560025
ಮಿಂಚಂಚೆ(ಈಮೇಲ್) :
skfeedback2021@gmail.com

- ರಕ್ಷಕರಿಗೆ ಕಾನೂನು ರಕ್ಷಣೆ
- ಪ್ರತಿಜ್ಞೆ ಸ್ವೀಕಾರದ ಅರ್ಥವೇನು
- ಎತ್ತ ಸಾಗುತ್ತಿದೆ ವಿಪಕ್ಷದ ನಡೆ

ಮತ್ತೊಂದು ಹೆಜ್ಜೆ ಮುಂದೆ ಹೋಗಿರುವ ಪ್ರತಿಪಕ್ಷ ಕಾಂಗ್ರೆಸ್ ಕೋರ್ಟ್ ಮೆಟ್ಟಿಲೇರಿರುವ ಸಚಿವರು ಸರ್ಕಾರದ ಪರ ನೀಡುವ ಉತ್ತರವನ್ನೇ ತಿರಸ್ಕರಿಸುವುದು. ಅಥವಾ ನಿರ್ದಿಷ್ಟ ಸಚಿವರಿಗೆ ಪ್ರಶ್ನೆಯನ್ನೇ ಕೇಳದಿರುವುದು. ಸಂಸದೀಯ ವ್ಯವಸ್ಥೆಯಲ್ಲಿ ಇದು ಸೂಕ್ತವಾದ ಮಾರ್ಗವೇ ಎನ್ನುವುದು ಉಲ್ಲೇಖಾರ್ಹ. ಸಚಿವರು ನೀಡುವ ಉತ್ತರ ವೈಯಕ್ತಿಕ ಅಲ್ಲ ಜನಕಲ್ಯಾಣದ ಹಿತದ್ದು ಎನ್ನುವ ಕನಿಷ್ಠ ಪ್ರಜ್ಞೆ ಆಕ್ಷೇಪಿಸುವವರಿಗೂ ಇರಬೇಕಾಗುತ್ತದೆ.

**ಸಾರ್ವಜನಿಕ ಸಂವಾದಕ್ಕೆ ಆಹ್ವಾನ**



ಹಾಗಾಗಿ ಮಹತ್ವದ ವಿಷಯಗಳ ಬಗ್ಗೆ ಈ ಹಿಂದೆಯೂ ಕನ್ನಡಿಗರ ಸಾಕ್ಷಿಪ್ರಜ್ಞೆ ಆಗಿರುವ 'ಸಂಯುಕ್ತ ಕರ್ನಾಟಕ' ಓದುಗರ ಮುಕ್ತ ಅಭಿಪ್ರಾಯವನ್ನು ಆಹ್ವಾನಿಸಿತ್ತು. ನಿರೀಕ್ಷೆ ಮೀರಿದ ಸ್ಪಂದನೆಯೂ ಸಿಕ್ಕಿತ್ತು. ಇದೀಗ ಇಂತಹದ್ದೇ ಒಂದು ಸಂದಿಗ್ಧ ಸ್ಥಿತಿ ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಯಲ್ಲಿ ಇಣುಕಿದೆ. ವಿಷಯಾಸಕ್ತ ಓದುಗರು ಸಾರ್ವಜನಿಕ ಸಂವಾದಕ್ಕೆ ವೇದಿಕೆಯಾಗುವ ನಿಟ್ಟಿನಲ್ಲಿ ತಮ್ಮ ಅಭಿಪ್ರಾಯಗಳ ಜತೆ ತಮ್ಮ ಭಾವಚಿತ್ರ ಲಗತ್ತಿಸುವುದು ಅಗತ್ಯ. ಗರಿಷ್ಠ 150 ಪದಗಳಿಗೆ ಮೀರದಂತೆ ಈ ಮೇಲಿನ ವಿಳಾಸಕ್ಕೆ ಆಯ್ದ ಬರಹಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಆ ಮೂಲಕ ಪತ್ರಿಕೆ ಜನತಂತ್ರದ ಧ್ವನಿಯಾಗಲಿದೆ.